ಸಂಖ್ಯೆ: ಕಂಇ 217 ಮುನೋಮು 2011. ಬೆಂಗಳೂರು, ದಿನಾಂಕ : 15ನೇ ಮಾರ್ಚ್, 2012.

ಶ್ರೀ ಬಸವೇಶ್ವರ ವೀರಶೈವ ವಿದ್ಯಾವರ್ಧಕ, ಸಂಘ, ಬಾಗಲಕೋಟೆ ಈ ಸಂಸ್ಥೆಯ ಬೆಂಗಳೂರಿನ ನಾಲ್ಡೆಜ್ ಪಾರ್ಕ್ ಆಫ್ ಇಂಡಿಯಾ ಟ್ರಸ್ಟ್ (ರಿ) ನಂ. 84, ಸರಸ್ವತಿ ರಾಣೋಜಿರಾವ್ ರಸ್ತೆ, ಬಸವನಗುಡಿ, ಬೆಂಗಳೂರು–4. ಟ್ರಸ್ಟಿನ ಎಲ್ಲಾ ಚರ ಸ್ಥಿರಾಸ್ತಿಗಳ ಜವಾಬ್ದಾರಿಯನ್ನು ವಿಲೀನಗೊಳಿಸುತ್ತಿರುವ ಸಂಬಂಧ ಲಿಖಿತ ವರ್ಗಾವಣೆ ಮಾಡಿಕೊಳ್ಳುತ್ತಿರುವ ದಸ್ತಾವೇಜಿನ ನೋಂದಣಿಗೆ ತಗಲಬಹುದಾದ ಮುದ್ರಾಂಕ ಶುಲ್ಕದಲ್ಲಿ ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಕಲಂ 9(1) ರನ್ವಯ ಶೇ. 50 ರಷ್ಟು ಮುದ್ರಾಂಕ ಶುಲ್ಕದಿಂದ ವಿನಾಯಿತಿಯನ್ನು ನೀಡಲು ಹಾಗೂ ನೋಂದಣಿ ಕಾಯ್ದೆ 1908ರ ಕಲಂ 78 ರನ್ವಯ ನೋಂದಣಿ ಶುಲ್ಕದಲ್ಲಿ ಸಂಪೂರ್ಣ ವಿನಾಯಿತಿಯನ್ನು ನೀಡಿ ಸರ್ಕಾರವು ಆದೇಶಿಸಿದೆ.

ಈ ಅಧಿಸೂಚನೆಯನ್ನು ದಿನಾಂಕ : 05–03–2012 ಸಂಖ್ಯೆ : ಆಇ 213 ವೆಚ್ಚ–7/2012ರಲ್ಲಿ ಆರ್ಥಿಕ ಇಲಾಖೆಯು ನೀಡಿರುವ ಸಹಮತಿ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ. ಕೆ. ರಾಮಚಂದ್ರ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ನೋಂದಣಿ ಮತ್ತು ಮುದ್ರಾಂಕ)

ಪಿ.ಆರ್. 209

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಇ 68 ಎಂಆರ್‌ಇ 2012 ಬೆಂಗಳೂರು, ದಿನಾಂಕ : 17ನೇ ಮಾರ್ಚ್, 2012.

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಕಲಂ 11(1)(ix)ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಪಾಂಡವಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಈ ಕೆಳಕಂಡ ಮೂವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಿದೆ :

ಕ್ರಮ ಸಂ.	ಸದಸ್ಯರ ಹೆಸರು ಶ್ರೀಯುತರು / ಶ್ರೀಮತಿ
01	ಜಗದೀಶ್ ಬಿನ್ ಚಿಕ್ಕಮೂಗೇಗೌಡ, ಚಿಕ್ಕಬ್ಯಾಡರಹಳ್ಳಿ, ಪಾಂಡವಪುರ ತಾಲ್ಲೂಕು.
02	ಬಿ. ನಿಂಗಪ್ಪ ಬಿನ್ ಬಸಪ್ಪ, ಹಾಗನಹಳ್ಳಿ, ಪಾಂಡವಪುರ ತಾಲ್ಲೂಕು.
03	ಪ್ರಕಾಶ ಬಿನ್ ಪುಟ್ಟಸ್ವಾಮೀಗೌಡ, ಸಂಗಾಪುರ, ಪಾಂಡವಪುರ ತಾಲ್ಲೂಕು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಿ. ಕೆ. ವಾಸುದೇವ ಮೂರ್ತಿ,
ಸರ್ಕಾರದ ಅಧೀನ ಕಾರ್ಯದರ್ಶಿ–1,
ಸಹಕಾರ ಇಲಾಖೆ.

ಪಿ.ಆರ್. 210

ಕೃಷಿ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಕೃಇ 04 ಕೃತೋಪ 2011 ಬೆಂಗಳೂರು, ದಿನಾಂಕ : 28ನೇ ಜನವರಿ, 2012.

ಅಧಿಸೂಚನೆ ಸಂಖ್ಯೆ : ಕೃಇ 04 ಕೃತೋಪ 2011, ದಿನಾಂಕ : 31–12–2011ರಲ್ಲಿ ಮಾಹಿತಿಹಕ್ಕು ಅಧಿನಿಯಮ 2005ರ ಕಲಂ 4(1)(ಎ)ರಡಿ ಕೃಷಿ ಇಲಾಖೆಯ ಕಾರ್ಯನಿರ್ವಹಣೆ ಹಾಗೂ ಇಲಾಖೆಯಲ್ಲಿ ನಿರ್ವಹಿಸುವ ವಿಷಯಗಳಿಗೆ ಸಂಬಂಧಿಸಿದಂತೆ ಕೃಷಿ (ಸೇವೆಗಳು) ವಿಭಾಗ : ಕೃಷಿ–ಎ ಶಾಖೆಯ ನಂತರದ ಕ್ರಮ ಸಂಖ್ಯೆ 3ರಲ್ಲಿ ವಿಷಯ ನಿರ್ವಹಿಸುವ ಕಡತ/ದಾಖಲೆಗಳಲ್ಲಿ ನಿರ್ವಹಿಸುವ ಮೂರು ಅಕ್ಷರಗಳ ಸೂಚಿ ಪದ (Trilated Index) ಗಳ AGE ನಂತರದಲ್ಲಿ AGP ಕೃಪಬ ಎಂಬ ಪದವನ್ನು ಸೇರಿಸಿ ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಮಂಜುನಾಥ ಪಾಟೀಲ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ, (ಸೇವೆಗಳು ಮತ್ತು ಸಮನ್ವಯ)

ಪಿ.ಆರ್. 219

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಒ 184 ಸಿಎನ್‌ಎಸ್ 2008, ಬೆಂಗಳೂರು, ದಿನಾಂಕ : 17ನೇ ಮಾರ್ಚ್, 2012.

ಸರ್ಕಾರದ ಅಧಿಸೂಚನೆ ಸಂಖ್ಯೆ : ಸಿಒ 184 ಸಿಎನ್‌ಎಸ್ 2008 ದಿನಾಂಕ 20–12–2011ರಲ್ಲಿ ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಹೊಸದುರ್ಗ ಇದರ ಆಡಳಿತ ಮಂಡಳಿಗೆ ನಾಮನಿರ್ದೇಶನ ಮಾಡಿದ್ದ ಶ್ರೀ ರಾಮಸ್ವಾಮಿ ಬಿನ್ ಬಂದಯ್ಯ, ಶ್ರೀರಾಂಪುರ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ : ಸಿಒ 184 ಸಿಎನ್‌ಎಸ್ 2008 ದಿನಾಂಕ 22–11–2011ರಲ್ಲಿ ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ., ಹೊಸದುರ್ಗ ಇದರ ಆಡಳಿತ ಮಂಡಳಿಗೆ ನಾಮನಿರ್ದೇಶನ ಮಾಡಿದ್ದ ಶ್ರೀಮತಿ ಭಾಗ್ಯಮ್ಮ ಕೋಂ ಅಂಜನಪ್ಪ, ಹೊನ್ನೇನಹಳ್ಳಿ, ಹೊಸದುರ್ಗ ತಾಲ್ಲೂಕು ಇವರ ನಾಮನಿರ್ದೇಶನಗಳನ್ನು ಈ ಕೂಡಲೇ ಜಾರಿಗೆ ಬರುವಂತೆ ರದ್ದುಪಡಿಸಿದೆ.

ಮುಂದುವರಿದು, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ : 11)ರ ಪ್ರಕರಣ 29ರ ಉಪ ಪ್ರಕರಣ (1)ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಶ್ರೀ ಡಿ. ಎಸ್. ಶಂಕ್ರಪ್ಪ, ಕಂಠಾಪುರ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರನ್ನು ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ.,

ಹೊಸದುರ್ಗ ಮತ್ತು ಶ್ರೀಮತಿ ಸಣ್ಣಮ್ಮ ಕೋಂ ಬಿ. ನಾಗಣ್ಣ, ಶ್ರೀರಾಂಪುರ ಇವರನ್ನು ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ., ಹೊಸದುರ್ಗ ಇದರ ಆಡಳಿತ ಮಂಡಳಿಗೆ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಸರ್ಕಾರದ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಸಿ. ಸತೀಶ್,

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಉಪ ಕಾರ್ಯದರ್ಶಿ,

ಸಹಕಾರ ಇಲಾಖೆ.

ಪಿ.ಆರ್. 220

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಒ 5 ಸಿಎಸ್ಎಸ್ 2012, ಬೆಂಗಳೂರು, ದಿನಾಂಕ : 16ನೇ ಮಾರ್ಚ್, 2012.

ಸರ್ಕಾರದ ಅಧಿಸೂಚನೆ ಸಂಖ್ಯೆ : ಸಿಒ 5 ಸಿಎಸ್ಎಸ್ 2012 ದಿನಾಂಕ 02–02–2012ರಲ್ಲಿ ಶ್ರೀ ಡಿ. ಎಂ. ಶಂಕರೇಗೌಡ ಬಿನ್ ಮೋಗಣ್ಣಗೌಡ, ಎಂ.ಐ.ಜಿ–11, ಹೌಸಿಂಗ್ ಬೋರ್ಡ್, ಚನ್ನರಾಯಪಟ್ಟಣ ಟೌನ್, ಹಾಸನ ಜಿಲ್ಲೆ, ಇವರನ್ನು ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತ, ಶ್ರೀನಿವಾಸಪುರ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ ಇದರ ಆಡಳಿತ ಮಂಡಳಿಗೆ ಮಾಡಿದ್ದ ನಾಮನಿರ್ದೇಶನವನ್ನು ಈ ಕೂಡಲೇ ಜಾರಿಗೆ ಬರುವಂತೆ ರದ್ದುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಸಿ. ಸತೀಶ್,

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಉಪ ಕಾರ್ಯದರ್ಶಿ,

ಸಹಕಾರ ಇಲಾಖೆ.

ಪಿ.ಆರ್. 221

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 33 ಮುಸೇವಿ 2012, ಬೆಂಗಳೂರು, ದಿನಾಂಕ : 08ನೇ ಮಾರ್ಚ್, 2012.

ಕರ್ನಾಟಕ ರಾಜ್ಯ ಧಾರ್ಮಿಕ ಪರಿಷತ್ತಿಗೆ ಸದಸ್ಯರಾಗಿ ನಾಮ ನಿರ್ದೇಶನ ಹೊಂದಿದ್ದ ಶ್ರೀ ಸಿದ್ದಪ್ಪ, "ಚಿನ್ಮಯ" ಗೋವಿಂದರಾಜನಗರ, ಬೆಂಗಳೂರು ಇವರು ನಿಧನರಾಗಿರುವ ಹಿನ್ನೆಲೆಯಲ್ಲಿ, ಸರ್ಕಾರಿ ಆದೇಶ ಸಂಖ್ಯೆ : ಕಂಇ 79 ಮುಸೇವಿ 2011 ದಿನಾಂಕ : 13–07–2011ನ್ನು ಭಾಗಶಃ ಮಾರ್ಪಡಿಸಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಕರ್ನಾಟಕ ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ಸಂಸ್ಥೆಗಳ ಅಧಿನಿಯಮ (1997)ರ ಕಲಂ 20ರ ಅಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಶ್ರೀ ಅಶೋಕ ಕುಮಾರ್ ಬಾದಿ, ನಂ. 9–112(ಎ), 'ಶ್ರೀ ಪ್ರಶಾಂತಿ', ಸೋಮೇಶ್ವರ ಅಂಚೆ, ಉಚ್ಚಿಲ್, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ, ಇವರನ್ನು ರಾಜ್ಯ ಧಾರ್ಮಿಕ ಪರಿಷತ್ತಿನ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಉಮಾಪತಿ,

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಮುಜರಾಯಿ)

ಪಿ.ಆರ್. 224

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆರ್‌ಡಿ 73 ಎಲ್‌ಜಿಇ 2011, ಬೆಂಗಳೂರು, ದಿನಾಂಕ : 07ನೇ ಮಾರ್ಚ್, 2012.

ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಸಬ್ ಸೆಕ್ಷನ್(1) ಸೆಕ್ಷನ್ 94–ಎ ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಬಳ್ಳಾರಿ ಜಿಲ್ಲೆ, ಶಿರಗುಪ್ಪ ತಾಲ್ಲೂಕಿನ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯನ್ನು ಕೆಳಕಂಡ ಅಧಿಕಾರಿ ಹಾಗೂ ಅಧಿಕಾರೇತರ ಸದಸ್ಯರನ್ನೊಳಗೊಂಡಂತೆ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಪುನರ್ ರಚಿಸಿ ಆದೇಶಿಸಿದೆ.

ಕ್ರಮ ಸಂ.	ತಾಲ್ಲೂಕು	ಸದಸ್ಯರು	
1.	ಶಿರಗುಪ್ಪ	1) ಶ್ರೀ ಎಂ. ಎಸ್. ಸೋಮಲಿಂಗಪ್ಪ, ಶಾಸಕರು	ಅಧ್ಯಕ್ಷರು
		2) ಶ್ರೀ ಹುಸೇನ್ ಪೀರ್ ತಂದೆ ಮಾಬುಸಾಬ ರಾವಿಹಾಳ್ ಅಂಚೆ, ಶಿರುಗುಪ್ಪ ತಾಲ್ಲೂಕು	ಸದಸ್ಯರು (ಸಾಮಾನ್ಯ)
		3) ಭೀಮಪ್ಪ ತಂದೆ ಈರಣ್ಣ ಶಿರಿಗೇರಿ ಅಂಚೆ, ಶಿರುಗುಪ್ಪ ತಾಲ್ಲೂಕು	ಸದಸ್ಯರು (ಪ.ಜಾತಿ)
		4) ಶ್ರೀಮತಿ ಪಾರ್ವತಮ್ಮ ಗಂಡ ನಿಂಗಪ್ಪ ಬೈರಗಮದಿನ್ನಿ ಅಂದೆ, ಶಿರುಗುಪ್ಪ ತಾಲ್ಲೂಕು	ಸದಸ್ಯರು (ಮಹಿಳೆ)
		5) ತಹಶೀಲ್ದಾರ್, ಶಿರುಗುಪ್ಪ ತಾಲ್ಲೂಕು, ಬಳ್ಳಾರಿ ಜಿಲ್ಲೆ.	ಸದಸ್ಯ ಕಾರ್ಯದರ್ಶಿ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್. ಜಿ. ಲಕ್ಷ್ಮೀನಾರಾಯಣ,

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಭೂ ಮಂಜೂರಾತಿ–3).

ಪಿ.ಆರ್. 232

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 125 ಎಂಎಲ್ಆರ್ 2008(B–4) (ಭಾಗ) ಬೆಂಗಳೂರು, ದಿನಾಂಕ : 21ನೇ ಮಾರ್ಚ್, 2012.

ಕರ್ನಾಟಕ ಪುರಸಭೆ ಕಾಯ್ದೆ 1964ರ ಪ್ರಕರಣ 11(1)(b)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಿನಾಂಕ 01–12–2008ರಂದು ಹೊರಡಿಸಿರುವ ಅಧಿಸೂಚನೆಯನ್ನು ರದ್ದುಪಡಿಸಿ, ಈ ಕೆಳಕಂಡವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಶಿರಗುಪ್ಪ ಪುರಸಭೆಗೆ ಸದಸ್ಯರನ್ನಾಗಿ ಸರ್ಕಾರವು ನಾಮ ನಿರ್ದೇಶನ ಮಾಡಿದೆ.

1. ಶ್ರೀ ಚಾಗಿಸುಬ್ಬಯ್ಯ ತಂದೆ ಚಾಗಿ ನರಸಪ್ಪ, ಶಿರಗುಪ್ಪ.
2. ಶ್ರೀ ಶಾವಿಪಲ್ಲೆ ಬಸವರಾಜು ತಂದೆ ಶಾವಿಪಲ್ಲೆ ಮಲ್ಲಪ್ಪ, ಹಳೇ ಆಂಜನೇಯ ಸ್ವಾಮಿಗುಡಿ ಹತ್ತಿರ, ಶಿರಗುಪ್ಪ.
3. ಶ್ರೀ ಸುಂಕಪ್ಪ ತಂದೆ ಹನುಮಂತಪ್ಪ, ಸದಾಶಿವ ನಗರ, ಶಿರಗುಪ್ಪ.
4. ಶ್ರೀ ಪಜುಲ್ ಸಾಬ್ ತಂದೆ ಮಹಮದ್ ಇಬ್ರಾಹಿಂ ಸಾಬ್, ರಾಮಕೃಷ್ಣ ಟಾಕೀಸ್ ಹತ್ತಿರ, ಶಿರಗುಪ್ಪ.
5. ಶ್ರೀಮತಿ ಸುಜಾತ ಗಂಡ ಹುಲಗಪ್ಪ, 7ನೇ ವಾರ್ಡ್, ಶಿರಗುಪ್ಪ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ವಿ. ರಾಮಪ್ಪ,

ಸರ್ಕಾರದ ಅಧೀನ ಕಾರ್ಯದರ್ಶಿ,

ನಗರಾಭಿವೃದ್ಧಿ ಇಲಾಖೆ.

ಪಿ.ಆರ್. 233

ವಸತಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ವಇ 102 ಕಗೃಮಂ 2012, ಬೆಂಗಳೂರು, ದಿನಾಂಕ : 27ನೇ ಮಾರ್ಚ್, 2012.

ಕರ್ನಾಟಕ ಗೃಹ ಮಂಡಳಿ ಅಧಿನಿಯಮ 1962ರ ಸೆಕ್ಷನ್ 3(2)(ಎ)ಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಜಿ. ಟಿ. ದೇವೇಗೌಡ ಇವರನ್ನು ದಿನಾಂಕ: 01–07–2011ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಮೂರು ವರ್ಷಗಳ ಅವಧಿಗೆ ಕರ್ನಾಟಕ ಗೃಹ ಮಂಡಳಿಯ ಅಧ್ಯಕ್ಷರನ್ನಾಗಿ ಪುನರ್ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಪಾರ್ವತಿ,

ಪೀಠಾಧಿಕಾರಿ–3,

ವಸತಿ ಇಲಾಖೆ.

ಪಿ.ಆರ್. 239

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಎಫ್‌ಡಿ 26 ಇಎಎ 2011(1). ಬೆಂಗಳೂರು, ದಿನಾಂಕ: 24ನೇ ಮಾರ್ಚ್, 2012.

ಕರ್ನಾಟಕ ಅಬಕಾರಿ ಕಾಯ್ದೆ, 1965 (ಕರ್ನಾಟಕ ಕಾಯ್ದೆ 21/1966)ರ ಕಲಂ 24 ಹಾಗೂ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968ರ ನಿಯಮ 8ರ ಉಪ ನಿಯಮ (4)ರೊಂದಿಗೆ ಓದಲಾದಂತೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಸರ್ಕಾರದ ಅಧಿಸೂಚನೆ ಸಂ. ಎಫ್‌ಡಿ 26 ಇಎಎ 2011 ದಿನಾಂಕ : 24–03–2011ನ್ನು ಮುಂದುವರೆಸುತ್ತಾ, ಕರ್ನಾಟಕ ಸರ್ಕಾರವು, ಇದೇ ನಿಯಮಗಳ ನಿಯಮ 3(1), 3(1ಎ), 3(11) ಮತ್ತು 3(11ಎ)ರಡಿಯಲ್ಲಿ ಡಿಸ್ಟ್ರಿಬ್ಯೂಟರ್ ಮತ್ತು ಸಗಟು ಮದ್ಯ ಮಾರಾಟದ ಹಕ್ಕನ್ನು ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತಕ್ಕೆ ಮಂಜೂರು ಮಾಡಿರುವುದರಿಂದ, ನಿಗಮವು, 2010–11ನೇ ಅಬಕಾರಿ ವರ್ಷದ ಏಪ್ರಿಲ್ 2011 ರಿಂದ ಜೂನ್ 2011ರ ವರೆಗಿನ ಅವಧಿಯಲ್ಲಿ ನಡೆಸಿರುವ ಮದ್ಯ ಮಾರಾಟ ವಹಿವಾಟಿನ ಮದ್ಯದ ಖರೀದಿ ಬೆಲೆಯ ಶೇಕಡ 6.9ರಷ್ಟು ಪ್ರಿವಿಲೇಜ್ ಶುಲ್ಕವನ್ನು ಸರ್ಕಾರಕ್ಕೆ ಪಾವತಿಸತಕ್ಕದ್ದೆಂದು ನಿರ್ದಿಷ್ಟಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಡಿ. ಎನ್. ವೆಂಕಟಚಲಪತಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಅಬಕಾರಿ).

ಪಿ.ಆರ್. 240

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಎಫ್‌ಡಿ 26 ಇಎಎ 2011(2). ಬೆಂಗಳೂರು, ದಿನಾಂಕ: 24ನೇ ಮಾರ್ಚ್, 2012.

ಕರ್ನಾಟಕ ಅಬಕಾರಿ ಕಾಯ್ದೆ, 1965 (ಕರ್ನಾಟಕ ಕಾಯ್ದೆ 21/1966)ರ ಕಲಂ 24 ಹಾಗೂ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968ರ ನಿಯಮ 8ರ ಉಪ ನಿಯಮ (4)ರೊಂದಿಗೆ ಓದಲಾದಂತೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಇದೇ ನಿಯಮಗಳ ನಿಯಮ 3(1), 3(1ಎ), 3(11) ಮತ್ತು 3(11ಎ)ರಡಿಯಲ್ಲಿ ಡಿಸ್ಟ್ರಿಬ್ಯೂಟರ್ ಮತ್ತು ಸಗಟು ಮದ್ಯ ಮಾರಾಟದ ಹಕ್ಕನ್ನು ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತಕ್ಕೆ ಮಂಜೂರು ಮಾಡಿರುವುದರಿಂದ, ನಿಗಮವು, 2011–12ನೇ ಅಬಕಾರಿ ವರ್ಷದ ಜುಲೈ 2011 ರಿಂದ ಮಾರ್ಚ್ 2012ರ ವರೆಗಿನ ಅವಧಿಯಲ್ಲಿ ನಡೆಸಿರುವ ಮದ್ಯ ಮಾರಾಟ ವಹಿವಾಟಿನ ಮದ್ಯದ ಖರೀದಿ ಬೆಲೆಯ ಶೇಕಡ 7ರಷ್ಟು ಪ್ರಿವಿಲೇಜ್ ಶುಲ್ಕವನ್ನು ಸರ್ಕಾರಕ್ಕೆ ಪಾವತಿಸತಕ್ಕದ್ದೆಂದು ನಿರ್ದಿಷ್ಟಪಡಿಸಿದೆ. ಈ ಅಬಕಾರಿ ವರ್ಷದ ಮುಂದಿನ ಅವಧಿಗೆ ಪ್ರಿವಿಲೇಜ್ ಶುಲ್ಕವನ್ನು ಪ್ರತ್ಯೇಕವಾಗಿ ನಿಗದಿಪಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಡಿ. ಎನ್. ವೆಂಕಟಚಲಪತಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಅಬಕಾರಿ).

ಪಿ.ಆರ್. 241

PERSONNEL AND ADMINISTRATIVE REFORMS SECRETARIAT

NOTIFICATION

No. DPAR 7 SMR 2012, Bangalore, Dated: 21st March, 2012

In exercise of the powers conferred by clause (ff) of rule 3 of the Karnataka Government Servants' (Medical Attendance) Rules 1963, the Government of Karnataka hereby adds the following item after item 295 of Schedule I to the said rules, namely :-

(296) Renuka Eye Hospital, 1st Floor, Lakshmi Complex, P.B. Road, Haveri-581110.

By Order and in the name of the Governor of Karnataka,
D. NAGESH PHATAK,
Under Secretary to Government,
Department of Personnel and Administrative Reforms (Service Rules-2)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 7 ಎಸ್‌ಎಂಆರ್ 2012.. ಬೆಂಗಳೂರು, ದಿನಾಂಕ: 21ನೇ ಮಾರ್ಚ್, 2012.

ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963ರ ನಿಯಮ 3ರ ಖಂಡ (ಎಫ್‌ಎಫ್)ನ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಸದರಿ ನಿಯಮಗಳ ಷೆಡ್ಯೂಲ್–Iರ ಐಟಂ 295ರ ನಂತರ ಈ ಕೆಳಕಂಡ ಐಟಂನ್ನು ಸೇರ್ಪಡೆಗೊಳಿಸಿದೆ :–

(296) ರೇಣುಕಾ ಐ ಹಾಸ್ಪಿಟಲ್, 1ನೇ ಮಹಡಿ, ಲಕ್ಷ್ಮೀ ಕಾಂಪ್ಲೆಕ್ಸ್, ಪಿ.ಬಿ. ರಸ್ತೆ, ಹಾವೇರಿ–581110

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಡಿ. ನಾಗೇಶ್ ಪಾಟಕ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು–2)

ಪಿ.ಆರ್. 245

PERSONNEL AND ADMINISTRATIVE REFORMS SECRETARIAT

NOTIFICATION

NO. DPAR 8 SMR 2012, Bangalore, Dated: 21st March, 2012.

In exercise of the powers conferred by clause (ff) of rule 3 of the Karnataka Government Servants` (Medical Attendance) rules 1963, the Government of Karnataka hereby adds the following item after item 296 of Schedule I to the said rules, namely:-

(297) St. Joseph's Hospital, #176, Bannimantap, Mysore-570 015.

By Order and in the Name of the Governor of Karnataka
D. NAGESH PHATAK,
Under Secretary to Government ,
Department of Personnel and Administrative Reforms
(Service Rules-2).

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 8 ಎಸ್‌ಎಂಆರ್ 2012, ಬೆಂಗಳೂರು, ದಿನಾಂಕ: 21ನೇ ಮಾರ್ಚ್, 2012.

ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963 ರ ನಿಯಮ 3 ರ ಖಂಡ (ಎಫ್‌ಎಫ್)ನ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಸದರಿ ನಿಯಮಗಳ ಷೆಡ್ಯೂಲ್–I ರ ಐಟಂ 296 ರ ನಂತರ ಈ ಕೆಳಕಂಡ ಐಟಂನ್ನು ಸೇರ್ಪಡೆಗೊಳಿಸಿದೆ :–

(297) ಸೆಂಟ್ ಜೋಸೆಫ್ಸ್ ಹಾಸ್ಪಿಟಲ್, #176, ಬನ್ನಿಮಂಟಪ, ಮೈಸೂರು–570 015.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಡಿ. ನಾಗೇಶ್ ಪಾಟಕ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು–2).

ಪಿ.ಆರ್. 249

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 425 ಬೆಮಪ್ರಾ 2011, ಬೆಂಗಳೂರು, ದಿನಾಂಕ: 30ನೇ ಮಾರ್ಚ್, 2012.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಪ್ರಕರಣ 3(3)(ಎಂ) ಮತ್ತು (4)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡವರನ್ನು ಬಿಜಾಪುರ ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯರನ್ನಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ :ನಅಇ 425 ಬೆಮಪ್ರಾ 2011 (ಭಾಗ) ದಿನಾಂಕ: 17–2–2012ರಲ್ಲಿ ನಾಮನಿರ್ದೇಶನ ಮಾಡಿ ಅಧಿಸೂಚನೆಯನ್ನು ಹೊರಡಿಸಲಾಗಿತ್ತು.

ಕ್ರಮ ಸಂಖ್ಯೆ	ಹೆಸರು ಮತ್ತು ವಿಳಾಸ	ವರ್ಗ	ಜವಾಬ್ದಾರಿ
1	ಶ್ರೀ. ಗೋಪಾಲ ಸದಾಶಿವ ಘಟಕಾಂಬಳೆ	ಎಸ್.ಸಿ	ಸದಸ್ಯರು
2	ಶ್ರೀ. ಸೂರಪ್ಪ ರೇವಣಸಿದ್ದಪ್ಪ ಮಿರ್ಜಿ	ಸಾಮಾನ್ಯ	ಸದಸ್ಯರು

ಆದರೆ, ಮೇಲೆ ಪ್ರಸ್ತಾಪಿಸಿರುವ ನಾಮನಿರ್ದೇಶಿತ ಸದಸ್ಯರ ಪೈಕಿ ಶ್ರೀ. ಗೋಪಾಲ ಸದಾಶಿವ ಘಟಕಾಂಬಳೆ (ಎಸ್.ಸಿ) ರವರ ನಾಮನಿರ್ದೇಶನವನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಪ್ರಕರಣ 3(3)(ಎಂ) ಮತ್ತು (4)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರದ ಇಚ್ಛಾನುಸಾರ ರದ್ದುಪಡಿಸಿದೆ. ಇವರ ಸ್ಥಾನದಲ್ಲಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಪ್ರಕರಣ 3(3)(ಎಂ) ಮತ್ತು (4)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡವರನ್ನು ನಾಮ ನಿರ್ದೇಶನ ಮಾಡಿ ಆದೇಶಿಸಲಾಗಿದೆ.

ಕ್ರಮ ಸಂಖ್ಯೆ	ಹೆಸರು ಮತ್ತು ವಿಳಾಸ	ವರ್ಗ	ಜವಾಬ್ದಾರಿ
1	ಶ್ರೀ. ರಾಜಕುಮಾರ ಲಕ್ಷ್ಮಣ ಜಾಧವ ಅಲ್ಲಾಪುರ ತಾಂಡ, ಸಿಂದಗಿ ರಸ್ತೆ, ಬಿಜಾಪುರ.	ಎಸ್.ಸಿ	ಸದಸ್ಯರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎಂ. ವಾಸುದೇವರಾವ್,

ಸರ್ಕಾರದ ಅಧೀನ ಕಾರ್ಯದರ್ಶಿ,

ನಗರಾಭಿವೃದ್ಧಿ ಇಲಾಖೆ.

ಪಿ.ಆರ್. 250

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 125 ಎಂಎಲ್ಆರ್ 2008 (A-23(P), ಬೆಂಗಳೂರು, ದಿನಾಂಕ: 28ನೇ ಮಾರ್ಚ್, 2012.

ಕರ್ನಾಟಕ ಪುರಸಭೆ ಕಾಯ್ದೆ 1964 ರ ಪ್ರಕರಣ 11(1)(b)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ದಿನಾಂಕ: 28–05–2009ರಲ್ಲಿ ಹೊರಡಿಸಿರುವ ಆದೇಶವನ್ನು ರದ್ದುಪಡಿಸಿ, ಈ ಕೆಳಕಂಡವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ **ಚಿಕ್ಕಬಳ್ಳಾಪುರ** ನಗರಸಭೆಗೆ ಸದಸ್ಯರನ್ನಾಗಿ ಸರ್ಕಾರವು ನಾಮ ನಿರ್ದೇಶನ ಮಾಡಿದೆ.

1. ಶ್ರೀ ಶ್ರೀನಿವಾಸ ಬಿನ್ ಲೇಟ್ ನಾರಾಯಣಸ್ವಾಮಿ, ನಂ 179, 1ನೇ ಕ್ರಾಸ್, ಶಾಂತಿನಗರ, ವಾರ್ಡ್ ನಂ21, ಚಿಕ್ಕಬಳ್ಳಾಪುರ.
2. ಶ್ರೀ ಎಸ್. ಶಶಿಧರ್ ಬಿನ್ ಲೇಟ್ ಚಿಕ್ಕಸಂಜೀವಯ್ಯ ಶೆಟ್ಟಿ, ನಂ.330, 19ನೇ ವಾರ್ಡ್, ಹಳೇ ರೇಷ್ಮೆಗೂಡಿನ ಮಾರುಕಟ್ಟೆ ರಸ್ತೆ, ಚಿಕ್ಕಬಳ್ಳಾಪುರ.
3. ಶ್ರೀ. ಆರ್.ಎನ್. ರಾಮಚಂದ್ರ ಬಿನ್ ಲೇಟ್ ಆರ್.ಜಿ.ನಂದೀಶಯ್ಯ, ನಂ.233, ಅಡೇನಹಳ್ಳಿ ಬೀದಿ, ಕಾರ್ಖಾನೆಪೇಟೆ, ಚಿಕ್ಕಬಳ್ಳಾಪುರ.
4. ಶ್ರೀ ಎನ್. ವೆಂಕಟೇಶ್ ಬಿನ್ ಲೇಟ್ ನಾರಾಯಣಪ್ಪ, ನಂ. 104, ಭಗತ್‌ಸಿಂಗ್‌ನಗರ, 2ನೇ ಕ್ರಾಸ್, ವಾರ್ಡ್ ನಂ.4, ಚಿಕ್ಕಬಳ್ಳಾಪುರ.
5. ಶ್ರೀಮತಿ ದೀನಾಮಣಿ ಕೋಂ.ವಿ.ಸಿ.ಮೋಹನ್, ಚೌಡೇಶ್ವರಿ ದೇವಸ್ಥಾನದ ಕ್ರಾಸ್, ಕೃಷ್ಣ ಟಾಕೀಸ್ ರಸ್ತೆ, ಚಿಕ್ಕಬಳ್ಳಾಪುರ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ವಿ.ರಾಮಪ್ಪ,

ಸರ್ಕಾರದ ಅಧೀನ ಕಾರ್ಯದರ್ಶಿ,

ನಗರಾಭಿವೃದ್ಧಿ ಇಲಾಖೆ.

ಪಿ.ಆರ್. 251

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಇ 62 ಎಂಆರ್ಇ 2012, ಬೆಂಗಳೂರು, ದಿನಾಂಕ: 20ನೇ ಮಾರ್ಚ್, 2012.

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 ರ ಕಲಂ 18(2) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, "ಶ್ರೀ ಪಿ.ಎ. ಪೆಮ್ಮಯ್ಯ" ಇವರನ್ನು ಮಡಿಕೇರಿ ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರ ಮಾರಾಟ ಮತ್ತು ಪರಿವರ್ತನಾ ಸಂಘ ನಿಯಮಿತ, ಮುರ್ನಾಡು ಈ ಸಂಘದ ಆಡಳಿತ ಮಂಡಳಿ ವತಿಯಿಂದ "ಮಡಿಕೇರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ" ಸದಸ್ಯರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ.ಕೆ. ವಾಸುದೇವ ಮೂರ್ತಿ,

ಸರ್ಕಾರದ ಅಧೀನ ಕಾರ್ಯದರ್ಶಿ–1,

ಸಹಕಾರ ಇಲಾಖೆ.

ಪಿ.ಆರ್. 253

PERSONNEL AND ADMINISTRATIVE REFORMS SECRETARIAT

NOTIFICATION

NO. DPAR 01 SAS 2011(P), Bangalore, Dated: 27th March, 2012.

Notification No. 14015/11/2010-AIS(I)-B, dated 14-3-2012 of Government of India, Ministry of Personnel, Public Grievances & Pensions, Department of Personnel & Training, New Delhi is hereby republished:

No. 14015/11/2010-AIS(I)-B

Government of India,

Ministry of Personnel, Public Grievances & Pensions

Department of Personnel & Training

New Delhi, the 14th March, 2012.

NOTIFICATION

In pursuance of the order of Hon'ble High Court of Karnataka dated 5.8.2011 in W.P.No.3855/2007 filed by Sh. N.M.Panali and in exercise of the powers conferred by Rule 8(1) of the Indian Administrative Service (Recruitment) Rules, 1954 read with Regulation 9(1) of the Indian Administrative Service (Appointment by Promotion) Regulations, 1955 and Rule 3 of the Indian Administrative Service (Probation) Rules, 1954, the President is pleased to appoint the following member of the State Civil Service of Karnataka to the Indian Administrative Service against the vacancies determined by Government of India under Regulation 5(1) of the said Regulations in consultation with the State Government for the Select List 2010 (Against the vacancies of 2010), on probation until further orders and to allocate him to the Karnataka Cadre, under Rule 5(1) of the Indian Administrative Service (Cadre) Rules, 1954.

(Select List 2010 (Against the vacancies of 2010)

Shri N.M.Panali

S.S.Shukla,

Under Secretary to the Government of India.

By Order and in the Name of the Governor of Karnataka

U.H. NARAYANASWAMY,

Under Secretary to Government ,

DPAR (Services-1).

P.R : 254

PERSONNEL AND ADMINISTRATIVE REFORMS SECRETARIAT

NOTIFICATION

NO. DPAR 236 SPS 2011(P), Bangalore, Dated: 27th March, 2012.

The Notification **No.I-18011/03/2012/IPS-IV dated: 12th March, 2012** of Government of India, Ministry of Home Affairs, New Delhi is hereby republished.

(TO BE PUBLISHED IN THE GAZETTE OF INDIA, PART-1 SECTION-2) .

No.I-18011/03/2012/-IPS-IV

Government of India

Ministry of Home Affairs

Room No.220, North Block,

New Delhi-1100001, dated 12th March,2012

NOTIFICATION

In exercise of powers conferred by Rule-3A of Indian Police Service (Probation) Rules, 1954, the President is pleased to confirm in the Indian Police Service, the following members of the Indian Police Service borne on the cadre of **KARNATAKA** with effect from dates mentioned against their names.

Sl. No.	Name of the IPS Probationers S/Shri	Date of Confirmation
1.	Anupam Agrawal, IPS(KTK:2008)	01.09.2010
2.	Ram Niwas Sepat, IPS (KTK:2008)	01.09.2010
3.	Boralingaiah M.B., IPS (KTK:2008)	22.12.2010
4.	Ajay Hilori, IPS (KTK:2008)	01.09.2010
5.	Smt Rohini Katoch, IPS (KTK:2008)	22.12.2010

Rajinder Kumar
Section Officer (IPS-IV)
Ph.No.011-23094038.

To
The Manager,
Government of India Press,
Faridabad (Haryana).
No.I-19011/03/2012/IPS-IV dated the 12th March
2012

By Order and in the Name of the Governor of Karnataka,
N.SRINIVASAMURTHY,
Under Secretary to Government ,
DP&AR (Services-IV).

P.R : 255

ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಸಂವಾಪ್ರ 221 ಕಸಧ 2012, ಬೆಂಗಳೂರು, ದಿನಾಂಕ: 24ನೇ ಮಾರ್ಚ್, 2012.

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಗೆ ಈ ಕೆಳಕಂಡವರುಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮೂರು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಅಧ್ಯಕ್ಷರು ಹಾಗೂ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಿದೆ.

ಕ್ರ.ಸಂ.	ಶ್ರೀ/ಶ್ರೀಮತಿ	
1	ಅಡ್ಡಂಡ ಸಿ. ಕಾರ್ಯಪ್ಪ "ರಂಗಭೂಮಿ", ಪೊನ್ನಂಪೇಟೆ	ಅಧ್ಯಕ್ಷರು
2	ಪ್ರೊ. ಇಟ್ಟೀರ ಕೆ. ಬಿದ್ದಪ್ಪ, ಗೋಣಿಕೊಪ್ಪ	ಸದಸ್ಯರು
3	ಚೇಂದಿರ ನಿರ್ಮಲಾ ಬೋಪಣ್ಣ, ಪೊನ್ನಂಪೇಟೆ	ಸದಸ್ಯರು
4	ಮಾಳೇಟಿರ ಅಭಿಮನ್ಯು ಕುಮಾರ್, ಸೋಮವಾರಪೇಟೆ	ಸದಸ್ಯರು
5	ಬೊಟ್ಟೋಳಂಡ ಮಿಟ್ಟು ಪೂಣಚ್ಚ, ಪೇರೂರು	ಸದಸ್ಯರು
6	ಚರ್ಮಂಡ ಪೂವಯ್ಯ (ಅಪ್ಪುಣು), ಕುಂಜಿಲಗೇರಿ	ಸದಸ್ಯರು
7	ಕುಡಿಯರ ತಮ್ಮಯ್ಯ, ಯುವಕಪಾಡಿ (ಪರಿಶಿಷ್ಟ ಪಂಗಡ)	ಸದಸ್ಯರು
8	ಕಸ್ತೂರಿ ಗೋವಿಂದಮ್ಮಯ್ಯ, ಗೌಳಿ ಬೀದಿ, ಮಡಿಕೇರಿ	ಸದಸ್ಯರು
9	ಚೇಂದಂಡ ಸುಮಿ ಸುಬ್ಬಯ್ಯ, ಮಾಲ್ದಾರೆ	ಸದಸ್ಯರು
10	ಮೇಲಪಂಡ. ಎ. ರಮೇಶ್, ಹೈಸೊಡ್ಲೂರು	ಸದಸ್ಯರು
11	ಉಮಾಪ್ರಭು, ನಾಪೊಕ್ಲು	ಸದಸ್ಯರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ಸುಧಾಕರ ಶೆಟ್ಟಿ,
ಸರ್ಕಾರದ ಉಪ ಕಾರ್ಯದರ್ಶಿ,
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ.

ಪಿ.ಆರ್. 256

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 338 ವೆಚ್ಚ–12/12, ಬೆಂಗಳೂರು, ದಿನಾಂಕ: 28ನೇ ಮಾರ್ಚ್, 2012.

ಕಾರವಾರದಲ್ಲಿನ ವಾಣಿಜ್ಯ ತೆರಿಗೆ ಇಲಾಖೆ ಕಟ್ಟಡದ ಕಾಮಗಾರಿಯನ್ನು ರೂ.105.00 ಲಕ್ಷಗಳ ವೆಚ್ಚದಲ್ಲಿ ಜಿಲ್ಲಾ ನಿರ್ಮಿತಿ ಕೇಂದ್ರ, ಕಾರವಾರ ಇವರಿಗೆ ನೇರವಾಗಿ ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ4 (ಜಿ)ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ವಾಣಿಜ್ಯ ತೆರಿಗೆ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಕಾಮಗಾರಿಗಳನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ವಾಣಿಜ್ಯ ತೆರಿಗೆ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕಾಂತ. ಎಸ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ(ಸಂಗ್ರಹಣಾ ಕೋಶ).

ಪಿ.ಆರ್. 257

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 339 ವೆಚ್ಚ–12/12, ಬೆಂಗಳೂರು, ದಿನಾಂಕ: 28ನೇ ಮಾರ್ಚ್, 2012.

ರಾಣೆಬೆನ್ನೂರಿನಲ್ಲಿನ ವಾಣಿಜ್ಯ ತೆರಿಗೆ ಇಲಾಖೆ ಕಟ್ಟಡದ ಕಾಮಗಾರಿಯನ್ನು ರೂ.96.15 ಲಕ್ಷಗಳ ವೆಚ್ಚದಲ್ಲಿ ಜಿಲ್ಲಾ ನಿರ್ಮಿತಿ ಕೇಂದ್ರ ಹಾವೇರಿ ಇವರಿಗೆ ನೇರವಾಗಿ ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ4 (ಜಿ)ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ವಾಣಿಜ್ಯ ತೆರಿಗೆ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಕಾಮಗಾರಿಗಳನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ವಾಣಿಜ್ಯ ತೆರಿಗೆ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕಾಂತ. ಎಸ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ(ಸಂಗ್ರಹಣಾ ಕೋಶ).

ಪಿ.ಆರ್. 258

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 125 ಎಂಎಲ್‌ಆರ್ 2008 (C-15)(ಭಾಗ), ಬೆಂಗಳೂರು, ದಿನಾಂಕ: 21ನೇ ಮಾರ್ಚ್, 2012.

ಕರ್ನಾಟಕ ಪುರಸಭೆ ಕಾಯ್ದೆ 1964 ರ ಪ್ರಕರಣ 352(1b) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ದಿನಾಂಕ 18–11–2008ರಲ್ಲಿ ಹೊರಡಿಸಿರುವ ಅಧಿಸೂಚನೆಯನ್ನು ಭಾಗಶಃ ಮಾರ್ಪಡಿಸಿ, ಶ್ರೀ. ನಾಗರಾಜ ಬಿನ್ ಚಂದ್ರಣ್ಣ ದಫೇದಾರ್ ಇವರ ಬದಲಿಗೆ ಶ್ರೀ. ಶಿವಪ್ಪ ತಂದೆ ಸಣ್ಣಗೆದ್ದೆಪ್ಪ ಓಲೇಕಾರ ಹಾಗೂ ಶ್ರೀ. ಗಂಗಪ್ಪಾ ಕೊರವರ್ ಇವರ ಬದಲಿಗೆ ಶ್ರೀ. ಸತ್ಯಪ್ಪ ತಂದೆ ಸತ್ಯಪ್ಪ ವಡ್ಡರ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಮುದಗಲ್ ಪಟ್ಟಣ ಪಂಚಾಯಿತಿಗೆ ಸದಸ್ಯರನ್ನಾಗಿ ಸರ್ಕಾರವು ನಾಮ ನಿರ್ದೇಶನ ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ವಿ.ರಾಮಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಪಿ.ಆರ್. 259

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 125 ಎಂಎಲ್‌ಆರ್ 2008 (B-56), ಬೆಂಗಳೂರು, ದಿನಾಂಕ: 21ನೇ ಮಾರ್ಚ್, 2012.

ಕರ್ನಾಟಕ ಪುರಸಭೆ ಕಾಯ್ದೆ 1964 ರ ಪ್ರಕರಣ 11(1)(b) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ದಿನಾಂಕ 23–12–2009ರಲ್ಲಿ ಹೊರಡಿಸಿರುವ ಅಧಿಸೂಚನೆಯನ್ನು ಭಾಗಶಃ ಮಾರ್ಪಡಿಸಿ, ಶ್ರೀ. ಗೋಪಾಲ್ ಪಿ.ಎಸ್. ಬಿನ್ ಪೀರಪ್ಪ ಹಾಗೂ ಶ್ರೀ. ಮಂಜುನಾಥ ಬಿನ್ ಮರಳಸಿದ್ದಪ್ಪ ಇವರ ಬದಲಿಗೆ ಶ್ರೀ ಶ್ರೀಧರಭಟ್ ಬಿನ್ ಲೇಟ್ ಶ್ರೀನಿವಾಸ, ಹೊಸದುರ್ಗ ಹಾಗೂ ಶ್ರೀಮತಿ ಚಂದ್ರಮ ಕೋಂ ರಾಜಪ್ಪ, ಹೊಸದುರ್ಗ ಇವರುಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಹೊಸದುರ್ಗ ಪುರಸಭೆಗೆ ಸದಸ್ಯರನ್ನಾಗಿ ಸರ್ಕಾರವು ನಾಮ ನಿರ್ದೇಶನ ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ವಿ.ರಾಮಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಪಿ.ಆರ್. 260

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 125 ಎಂಎಲ್‌ಆರ್ 2008 (C-)(ಭಾಗ), ಬೆಂಗಳೂರು, ದಿನಾಂಕ: 21ನೇ ಮಾರ್ಚ್, 2012.

ಕರ್ನಾಟಕ ಪುರಸಭೆ ಕಾಯ್ದೆ 1964 ರ ಪ್ರಕರಣ 352(1b) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ದಿನಾಂಕ 01–01–2009ರಲ್ಲಿ ಹೊರಡಿಸಿರುವ ಅಧಿಸೂಚನೆಯನ್ನು ರದ್ದುಗೊಳಿಸಿ, ಈ ಕೆಳಕಂಡವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ತೆಕ್ಕಲಕೋಟೆ ಪಟ್ಟಣ ಪಂಚಾಯಿತಿಗೆ ಸದಸ್ಯರನ್ನಾಗಿ ಸರ್ಕಾರವು ನಾಮ ನಿರ್ದೇಶನ ಮಾಡಿದೆ.

1. ಶ್ರೀ. ಪುರುಷೋತ್ತಮ ತಂದೆ ಸಿನಿಮಾ ಸಿದ್ಧಯ್ಯ, ಬಳ್ಳಾರಿ ರಸ್ತೆ, ತೆಕ್ಕಲಕೋಟೆ.
2. ಶ್ರೀ. ಸಿದ್ದಯ್ಯ ತಂದೆ ಮಾರೆಪ್ಪ, ಹರಿಹನ ಕೋಟೆ, ತೆಕ್ಕಲಕೋಟೆ.
3. ಶ್ರೀ. ಮರೆಪ್ಪ ತಂದೆ ಸಿದ್ದಪ್ಪ, ಅಗಸರ ಓಣಿ, ತೆಕ್ಕಲಕೋಟೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ವಿ.ರಾಮಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಪಿ.ಆರ್. 261

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 125 ಎಂಎಲ್‌ಆರ್ 2008 (C-60)(ಭಾಗ), ಬೆಂಗಳೂರು, ದಿನಾಂಕ: 21ನೇ ಮಾರ್ಚ್, 2012.

ಕರ್ನಾಟಕ ಪುರಸಭೆ ಕಾಯ್ದೆ 1964 ರ ಪ್ರಕರಣ 352(1)(b) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ದಿನಾಂಕ 12–01–2010ರ ಅಧಿಸೂಚನೆಯನ್ನು ಭಾಗಶಃ ಮಾರ್ಪಡಿಸಿ, ಶ್ರೀ. ಎಂ.ಪಿ. ಅಮರನಾಥ್ ಬಿನ್ ಪುಂಡರಿಕಾಕ್ಷಪ್ಪ ಇವರ ಬದಲಿಗೆ ಶ್ರೀ. ಕೆ.ಪಿ. ಪ್ರಹ್ಲಾದ್ ಬಿನ್ ಶ್ರೀ. ಕನಕ ಪದ್ಮನಾಭಯ್ಯ, ಭಾಗ್ಯಜ್ಯೋತಿ ನಗರ, ಮೊಳಕಾಲ್ಮೂರು ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಮೊಳಕಾಲ್ಮೂರು ಪಟ್ಟಣ ಪಂಚಾಯಿತಿಗೆ ಸದಸ್ಯರನ್ನಾಗಿ ಸರ್ಕಾರವು ನಾಮ ನಿರ್ದೇಶನ ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ವಿ.ರಾಮಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಪಿ.ಆರ್. 262

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 125 ಎಂಎಲ್‌ಆರ್ 2008 (B-26)(ಭಾಗ), ಬೆಂಗಳೂರು, ದಿನಾಂಕ: 19ನೇ ಮಾರ್ಚ್, 2012.

ಕರ್ನಾಟಕ ಪುರಸಭೆ ಕಾಯ್ದೆ 1964 ರ ಪ್ರಕರಣ 11(1)(b) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ದಿನಾಂಕ 18–11–2008ರಂದು ಹೊರಡಿಸಿರುವ ಅಧಿಸೂಚನೆಯನ್ನು ಭಾಗಶಃ ಮಾರ್ಪಡಿಸಿ, ಶ್ರೀ. ಮಹಾಂತೇಶ ತಂದೆ ರಾಯನಗೌಡ ಕರಡಕಲ್ ಇವರ ಬದಲಿಗೆ ಶ್ರೀ. ಶರಣಬಸವ ತಂದೆ ಅಮರೇಗೌಡ ಮಾಲೀ ಪಾಟೀಲ್, ಕರಡಕಲ್, ಲಿಂಗಸಗೂರು ತಾಲ್ಲೂಕು ಇವರನ್ನು ಹಾಗೂ ಶ್ರೀ ಪೋಶಣ್ಣ ಬಿನ್ ಅಮರಪ್ಪ ನಾಯಕ ಇವರ ಬದಲಿಗೆ ಶ್ರೀ. ಶರಣಪ್ಪ ತಂದೆ ಮರಿಯಪ್ಪ, ಲಿಂಗಸಗೂರು ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಲಿಂಗಸಗೂರು ಪುರಸಭೆಗೆ ಸದಸ್ಯರನ್ನಾಗಿ ಸರ್ಕಾರವು ನಾಮ ನಿರ್ದೇಶನ ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ವಿ.ರಾಮಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಪಿ.ಆರ್. 263

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 125 ಎಂಎಲ್‌ಆರ್ 2008 (B-64)(ಭಾಗ), ಬೆಂಗಳೂರು, ದಿನಾಂಕ: 21ನೇ ಮಾರ್ಚ್, 2012.

ಕರ್ನಾಟಕ ಪುರಸಭೆ ಕಾಯ್ದೆ 1964 ರ ಪ್ರಕರಣ 11 (1) (b) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ದಿನಾಂಕ 26–08–2009ರಲ್ಲಿ ಹೊರಡಿಸಿರುವ ಅಧಿಸೂಚನೆಯನ್ನು ರದ್ದುಪಡಿಸಿ, ಈ ಕೆಳಕಂಡವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅರಸೀಕೆರೆ ಪುರಸಭೆಗೆ ಸದಸ್ಯರನ್ನಾಗಿ ಸರ್ಕಾರವು ನಾಮ ನಿರ್ದೇಶನ ಮಾಡಿದೆ.

1. ಶ್ರೀ. ಶಿವನ್ ರಾಜ್ ಬಿನ್ ಸುಬ್ರಹ್ಮಣ್ಯಂ, ಹಾಸನ ರಸ್ತೆ, ಬಲ ಭಾಗ, 1ನೇ ಕ್ರಾಸ್, ಅರಸೀಕೆರೆ.
2. ಶ್ರೀ. ರೋಷನ್‌ಲಾಲ್ ಚೋಪ್ರ ಬಿನ್ ಶಾಂತಿಲಾಲ್ ಚೋಪ್ರ, ಕಡ್ಲೇಬೀದಿ, ಅರಸೀಕೆರೆ.
3. ಶ್ರೀ. ಟಿ.ವಿ. ಅರುಣ್ ಕುಮಾರ್ ಬಿನ್ ಲೇಟ್ ಟಿ.ಎಸ್.ವಿಶ್ವನಾಥ್, ಚನ್ನಕೇಶವ ನಿಲಯ, ಬಸವೇಶ್ವರ ನಗರ, 2ನೇ ಮುಖ್ಯರಸ್ತೆ, ಅರಸೀಕೆರೆ.
4. ಶ್ರೀಮತಿ ಕೆ. ರೂಪ ಸಂಪತ್ ಕುಮಾರ್,. ಬಸವೇಶ್ವರ ನಗರ, 4ನೇ ಕ್ರಾಸ್, ಅರಸೀಕೆರೆ
5. ಶ್ರೀ ಎಂ. ಶ್ರೀಧರ್ ಬಿನ್ ಲೇಟ್ ಸಿ.ಮುರುಗೇಶನ್, ಕೇರಾಫ್ ದಾಮೋದರ್ ಮೊದಲಿಯಾರ್ ಬೀದಿ, ಅರಸೀಕೆರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ವಿ.ರಾಮಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಪಿ.ಆರ್. 264